ಓ ಎಸ್ ನಂ.57/2025
ಡಿ.ಡಬ್ಲ್ಯೂ-1 ದಾನಮ್ಮ ಗಂಡ ಚಂದಪ್ಪ ಪರಿಯಾಣ

**(ಇಂದು ದಿನಾಂಕಃ 29-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಮುಖ್ಯ ವಿಚಾರಣೆಃ ಶ್ರೀ ಎಂ ಎಂ ಕೆ ವಕೀಲರಿಂದ.

ನಾನು ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ನನ್ನ ಹೇಳಿಕೆಯ ಮೇರೆಗೆ ಅದನ್ನು ದಾಖಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದ ಕೂಡಿರುತ್ತವೆ ಎಂದು ಪ್ರಮಾಣಿಕರಿಸಿರುತ್ತೇನೆ.

ಪಾಟೀ ಸವಾಲು : ಶ್ರೀ ಎಂ ಎಸ್ ಪಿ ವಕೀಲರಿಂದ.

ವಾದಿ ರೇವಣಸಿದ್ದಪ್ಪ ನನ್ನ ಗಂಡನಾದ ಚಂದಪ್ಪರವರ ತಮ್ಮನಾಗಿರುತ್ತಾನೆ. ೨ನೇ ಪ್ರತಿವಾದಿ ಶಂಕರ ಕೂಡಾ ನನ್ನ ಗಂಡನ ತಮ್ಮನಾಗಿರುತ್ತಾನೆ. ದಾವಾ ಆಸ್ತಿಗಳು ಹಿರಿಯರಿಂದ ಬಂದಿವೆ ಎಂದರೆ ಸರಿ. ಸರ್ವೆ ನಂಬರ ೧೭/೧ ರಲ್ಲಿ ೨ ಎಕರೆ ಜಮೀನು ಚಿಂಚೋಳಿಯಲ್ಲಿ ಇದೆ ಎಂದರೆ ಸರಿ. ಸರ್ವೆ ನಂಬರ ೧೭/೪ ರಲ್ಲಿ ೧ ಎಕರೆ ಜಮೀನೂ ಕೂಡಾ ಚಿಂಚೋಳಿಯಲ್ಲಿ ಇದೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಚಂದಪ್ಪ, ಶಂಕರ ಮತ್ತು ರೇವಣಸಿದ್ದಪ್ಪರವರಿಗೆ ಸಮನಾದ ಪಾಲು ಇದೆ ಎಂದರೆ ಸಾಕ್ಷಿಯು ೨ನೇ ಪ್ರತಿವಾದಿ ಶಂಕರರವರು ಈಗಾಗಲೆ ಪಾಲು ತೆಗೆದುಕೊಂಡಿರುತ್ತಾರೆ ಎನ್ನುತ್ತಾರೆ. ಸರ್ವೆ ನಂಬರ ೧೭/೧ ರಲ್ಲಿ ೨ ಎಕರೆ ಜಮೀನು ಮೊದಲು ನನ್ನ ಹೆಸರಿನಲ್ಲಿತ್ತು ಎಂದರೆ ಸರಿ. ನಾನು ೩ನೇ ಪ್ರತಿವಾದಿ ಸುರೇಖಾರವರ ಹೆಸರಿಗೆ ಸದರಿ ಜಮೀನನ್ನು ವರ್ಗಾವಣೆ ಮಾಡಿದ್ದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ೧ ಎಕರೆ ಜಮೀನು ವಾದಿಗೆ ಕೂಡಾ ಹೋಗಬೇಕು ಎಂದರೆ ಸಾಕ್ಷಿಯು ನಾವು ಕೊಡುವುದಿಲ್ಲ, ಅದು ನಮ್ಮ ಮಾವನಿಂದ ನನಗೆ ಬಂದಿರುತ್ತದೆ

ಎನ್ನುತ್ತಾರೆ. ಸದರಿ ಜಮೀನು ನನ್ನ ಮಾವನಿಂದ ಬಂದ ಹಿರಿಯರ ಆಸ್ತಿಯಾಗಿದೆ ಎಂದರೆ ಸರಿ. ನಾನು ಮತ್ತು ನನ್ನ ಮೈದುನನಾದ ಶಂಕರ ಸೇರಿಕೊಂಡು ಶಂಕರರವರ ಹೆಂಡತಿಯಾದ ಸುರೇಖಾರವರ ಹೆಸರಿನಲ್ಲಿ ಜಮೀನು ಮಾಡಿರುತ್ತೇವೆ ಎಂದರೆ ಸರಿ. ವಾದಿ ರೇವಣಸಿದ್ದರವರಿಗೂ ಕೂಡಾ ಜಮೀನು ಹೋಗಬೇಕು ಎಂದರೆ ಸಾಕ್ಷಿಯು ನಾವು ಕೊಡುವುದಿಲ್ಲ ಎನ್ನುತ್ತಾರೆ. ವಾದಿಗೆ ಪಾಲು ನೀಡಬಾರದು ಎಂದ ಉದ್ದೇಶದಿಂದ ನಾನು ೨ ಮತ್ತು ೩ನೇ ಪ್ರತಿವಾದಿಗಳ ಮಾತುಕೇಳಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಗೊತ್ತಾಗದಂತೆ ನಾವು ಸುಳ್ಳು ದಾಖಲೆಗಳನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.